ಮಾಯೆಯನ್ನು ಗೆಲ್ಲಬೇಕು ಅನ್ನುತ್ತಿದ್ದವನೇ ಗೆಲ್ಲಲಾಗದ ಮಾಯೆಯಲ್ಲಿ ಸಿಲುಕಿಸಿದ್ದಾನೆ! ಯಾವುದು ಮಾಯೆ? ಅವನೆ? ನಾನೆ? ನಮ್ಮೊಲವೆ? ನನ್ನೊಲವೆ? ಅವನೂ ಸೇರಿದಂತೆ ಇಡೀ ಜಗವೆ? ಕೇಳಬೇಕೆಂದುಕೊಂಡಾಗಲೆಲ್ಲಾ ನೋಡು ಗೋವರ್ಧನಗಿರಿ ಹಸುಗಳಿಗೆ ಎಷ್ಟೊಂದು ಮೇವು ಕೊಡುತ್ತಿದೆ.

ಬಂದು ಮಂದೆಯಾಗಲೆಂದು ದೊಡ್ಡಕಲ್ಲಿನ ಮೇಲೆ ಕೂರುತ್ತಿದ್ದವು. ಅವನು ಪಿಳ್ಳಂಗೋವಿ ನುಡಿಸುತ್ತಿದ್ದ. ನಾವು ಕೂರುವ ಮೊದಲು ಗಾಳಿ ಕಲ್ಲಮೇಲಿನ ಧೂಳು ಗುಡಿಸುತ್ತಿತ್ತು. ಈಗ ಹಾಗಿಲ್ಲ. ನಾನೇ ಧೂಳನ್ನು ಊದಿ ಕುಳಿತುಕೊಳ್ಳುವಂತಾಗಿತ್ತು. ಗಂಧರ್ವಗಿರಿಗೆ ಮೌನದ ಬಿಂಕ. ಯಮುನೆಗೂ ಅಷ್ಟೆ! ಅವನು ಹೋಗುವಾಗ ಹೇಳದೆ ಹೋದುದು ಕಾರಣವಿದ್ದೀತು. ನಾನು ಹೇಳಬೇಡವೆಂದಿದ್ದೆನೆ?

ಕರೆದೊಯ್ಯಲು ಬಂದಿದ್ದ ಅಕ್ರೂರನಿಗೆ ಯಶೋದಮ್ಮ ಎಲೆ ಹಾಕಿ ಕೂರಿಸಿದಾಗ, ಅವನು ಉಂಡೇಳುವಷ್ಟರಲ್ಲಿ ನಾಲ್ಕು ಹೆಜ್ಜೆ ಹಾಕಿ ಹೋಗಿ ಹೇಳಿಬರಬಹುದಿತ್ತು. ಹಾಗೆ ಮಾಡಿದ್ದರೆ ಎಷ್ಟು ಚೆನ್ನಿರುತ್ತಿತ್ತು? ಅವನ ಮನದಿಂಗಿತ ಅವನಿಗೇ ಅರಿವಷ್ಟೆ.

ರಥವೇರಲು ಬಲಗಾಲೆತ್ತಿದ್ದವನು ಎಲ್ಲರಿಂದ ದೂರ ನಿಂತಿದ್ದ ನನ್ನ ಬಳಿಬಂದ. ನಿನ್ನ ಬೊಗಸೆಗಣ್ಣರಳಿಸು, ನನ್ನನ್ನು ನೋಡಿಕೊಳ್ಳುವೆ ಅಂದ. ಅವನು ತುಂಬಿಕೊಳ್ಳುವಷ್ಟು ಹಿಗ್ಗಿಸಿದೆ. ಆ ಹಿಗ್ಗಲಿಕೆ ಸಾಲದೆನ್ನಿಸಿ ಕಣ್ಣು ನೊಂದಿತು. ಎದೆ ಮೇಲೆ ಕೈಯಿರಿಸಿ ಧ್ಯಾನದಲ್ಲಿರುವಂತೆ ಕಣ್ಣು ಮುಚ್ಚು. ಆ ಭಂಗಿಯನ್ನು ಹೃದಯದ ತುಂಬ ತುಂಬಿಕೊಳ್ಳುವೆ ಅಂದ. ಎಷ್ಟುಹೊತ್ತು ಹಾಗಿದ್ದೆನೊ ತಿಳಿಯಲಿಲ್ಲ. ಮುಂದಲೆ ಮೂಸಿದ; ಹಣೆಗೆ ಮುತ್ತಿಟ್ಟ. ರಥಚಕ್ರ ಉರುಳುವ ಸದ್ದು. ಕಣ್ಣು ತೆರೆದೆ. ಅವನು ಗೋವರ್ಧನಗಿರಿಯತ್ತ ನೋಡುತ್ತ ಕೈಮುಗಿದ. ಇದ್ದವರೆಲ್ಲ ಅವನಿಗೆ ಕೈಮುಗಿದು ನಿಂತರು. ಯಮುನೆಯ ದಿಕ್ಕಿಗೆ ತಿರುಗಿ ಎದೆ ಮೇಲೆ ಕೈ ಇರಿಸಿಕೊಂಡ. ಎಲ್ಲರೂ ಅವನಂತೆ ಮಾಡಿದರು. ನನ್ನ ತುಟಿಯಂಚಿನಲ್ಲಿ ಕಿರುನಗೆ ನಿಂತಿತು.

ರಥಚಕ್ರ ಉರುಳುತ್ತಿತ್ತು. ನನ್ನ ಕಣ್ಣಿಗೆ ಕಾಣುತ್ತಿದ್ದುದು ಅವನ ಮುಡಿಯ ನವಿಲುಗರಿ ಮಾತ್ರ. ಕಣ್ಣೀರು ತಡೆಯುತ್ತ ಯಶೋದಮ್ಮ 'ಹಕ್ಕಿ ಹಾರಿ ಹೋದರೂ ಗೂಡು ನಿದ್ದೆ ಮಾಡದು' ಎಂದು ಹೇಳಿದ್ದು ಕೇಳಿಸಿತು. ಅವಳು ತನಗೆ ಹೇಳಿಕೊಂಡಳೆ? ನನಗೂ ಹೇಳಿದ್ದೆ? ಅವನು ಒಂದು ಸಲ ಹಿಂದಕ್ಕೆ ತಿರುಗಿ ನೋಡಿದ್ದರೆ, ಓಡೋಡಿ ರಥವೇರಿಬಿಡುತ್ತಿದ್ದೆನೇನೊ...

★★★

ಬಾಂದಳದಲ್ಲಿ ನವಮಿಚಂದಿರ. ಕಳೆಗುಂದಿಸದಂತೆ ಹರಡಿದ ಕರಿಮುಗಿಲುಗಳು. ಅಪರ್ಣೆ ಶಿವಜಟೆಯ ಬಾಚುವಾಗ ಹರಡಿದಂತೆ. ಅದನ್ನು ಬಾಚುವ ಬಾಚಣಿಗೆ ಯಾವುದಿದೆ ಜಗದಲ್ಲಿ? ಅವಳ ಕೈವೆರಲ ಉಗುರುಗಳೇ ಬಾಚುಹಣಿಗೆ. ಬಾಚುವುದೇನು ಸುಲಭವೆ? ಗಂಗೆಗೆ ಉಗುರ ಮೊನಚು ತಾಗಬಾರದು. ಬಾಚುವವರೆಗೆ ಇಳಿ. ಆಮೇಲೆ ಏರು ಅನ್ನುವಂತಿಲ್ಲ. ಇಳಿದರೆ, ಏರುವ ಮೊದಲೆ ಈ ಸವತಿ ಮುಡಿ ಕಟ್ಟಿಬಿಟ್ಟರೆ ಎಂಬ ಶಂಕೆ ಅವಳಿಗೆ. ಚಂದ್ರನನ್ನು ಇಳಿಸಿ, ಬಾಚಿದ ಮೇಲೆ ಏರಿಸಬಹುದು. ಇದೆಲ್ಲ ಕಷ್ಟವಾದರೂ ಬಾಚುತ್ತಾಳೆ ಜಾಣೆ. ಅವಳ ತಾಳ್ಮೆ ದೊಡ್ಡದು. 'ಒಮ್ಮೆ